ಇ) ಸಾರಿಗೆ ಭತ್ಯೆ

ಈ) ಶೇ 50 ರಷ್ಟು ಇಂಧನ ರಿಯಾಯ್ತಿ

ಉ) ವೃದ್ಧಾಶ್ರಮಗಳು

ಊ) ಬುದ್ಧಿ ಮಾಂದ್ಯರ ಸಂಸ್ಥೆಗಳು.

ರಾಜ್ಯದಲ್ಲಿ ದರೋಡೆಗಳು ಹೆಚ್ಚುತ್ತಿರುವುದು

822 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 2 ತಿಂಗಳಲ್ಲಿ ದರೋಡೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇವುಗಳಿಗೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ)ಕಳೆದ ಎರಡು ತಿಂಗಳಲ್ಲಿ ವರದಿಯಾದ ದರೋಡೆಗಳು ಹೆಚ್ಚುತ್ತಿರುವ ಪ್ರವೃತ್ತಿಯನ್ನು ತೋರುತ್ತಿಲ್ಲ.

ಆ) ಉದ್ಭವಿಸುವುದಿಲ್ಲ. ಆದರೆ ದರೋಡೆಗಳನ್ನು ತಪ್ಪಿಸಲು ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ:

ಎಲ್ಲಾ ಜಿಲ್ಲೆ ಮತ್ತು ನಗರಗಳಲ್ಲಿ ದರೋಡೆ ನಿರೋಧಿ ದಳಗಳನ್ನು ರಚಿಸಲಾಗಿದೆ. ಮತ್ತು ದರೋಡೆ ಹೆಚ್ಚಾಗಿ ವರದಿಯಾಗಿರುವ ಸ್ಥಳಗಳು ಮತ್ತು ನಗರ, ಪಟ್ಟಣ, ಹಳ್ಳಿಗಳ ಹೊಲವಲಯದಲ್ಲಿ ರಾತ್ರಿ ಗಸ್ತನ್ನು ಬಲಪಡಿಸಲು ಒತ್ತು ನೀಡಲಾಗಿದೆ. ಹೆದ್ದಾರಿಗಳಲ್ಲಿ ಮತ್ತು ರಸ್ತೆಗಳಲ್ಲಿ ಶಸ್ತ್ರಾಸ್ತ್ರ ಗಸ್ತನ್ನು ತೀವ್ರಗೊಳಿಸಲಾಗಿದೆ. ಕಗ್ಗತ್ತಲು ರಾತ್ರಿಗಳಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿರುವ ಅಪಚರಿತರನ್ನು ಹಿಡಿಯಲು ವಿಶೇಷ ನಾಕಾಬಂದಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪಕ್ಕದ ರಾಜ್ಯಗಳ ಪೋಲೀಸರ ಸಹಕಾರ ಪಡೆದು ಈ ಹಿಂದಿನ ಸಂದರ್ಭಗಳಲ್ಲಿ ದರೋಡೆ ನಡೆಸಿರುವ ಅಂತರ ರಾಜ್ಯ ಅಪರಾಧಿಗಳ ಮತ್ತು ಎಂ.ಓ.ಬಿ.ಅಪರಾಧಿಗಳ ಪಟ್ಟಿಯನ್ನು ತಯಾರಿಸಲು ಪ್ರಯತ್ನ ಮಾಡಲಾಗಿದೆ. ರಾಜ್ಯಮಟ್ಟದಲ್ಲಿ ಎರಡು ದರೋಡೆ ನಿರೋಧ ದಳಗಳನ್ನು, ಇಬ್ಬರು ಪೋಲೀಸ್ ಸೂಪರಿಂಟೆಂಡೆಂಟರ ಮೇಲ್ವಿಚಾರಣೆಯಲ್ಲಿ ಸಿ.ಐ.ಡಿ.ಯಲ್ಲಿ ಸ್ಥಾಪಿಸಲಾಗಿದೆ, ಸಿ.ಐ.ಡಿ.ಯ ದರೋಡೆ ನಿರೋಧ ದಳದ ಅಧಿಕಾರಿಗಳು ಬಹುತೇಕ ಎಲ್ಲಾ ವೃತ್ತಿ ನಿರತ ದರೋಡೆ ಘಟನಾ ಸ್ಥಳಗಳಿಗೆ ಭೇಟಿ ಕೊಡುತ್ತಿದ್ದಾರೆ ಮತ್ತು ಪಕ್ಕದ ರಾಜ್ಯ ಪೋಲೀಸರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ. ಗೃಹ ರಕ್ಷಕರನ್ನು ಸಹ ಪೋಲೀಸ್ ಸಿಬ್ಬಂದಿ ಹೆಚ್ಚಿಸಲು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಬಗ್ಗೆ

823- ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

2) ಆ ಪೈಕಿ ಎಷ್ಟು ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಕಟ್ಟಡಗಳಿವೆ?

3) ಉಳಿದ ವಿದ್ಯಾರ್ಥಿನಿಲಯಗಳಿಗೆ ಯಾವಾಗ ಕಟ್ಟಡಗಳನ್ನು ಕಟ್ಟಲಾಗುವುದು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

1) ಪರಿಶಿಷ್ಟ ಜಾತಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು - 636